ಶ್ರೀ ಡಿ. ಕೆ. ಶಿವಕುಮಾರ್: Minority Development Corportation, SC/ST Development Corporation ಅವರು ಇದನ್ನೆಲ್ಲಾ ಮಾಡುವಂಥದ್ದು, ತಮ್ಮದೇನಾದರೂ ವ್ಯಾಪಕವಾದ ಸಲಹೆ ಇದ್ದರೆ ದಯವಿಟ್ಟು writing ನಲ್ಲಿ ಕೊಡಿ, we will examine this.

ಅಧ್ಯಕ್ಷರು: ವಿನಯ ಕುಲಕರ್ಣಿ ಇಲ್ಲ, ವಾಸು ಇಲ್ಲ, ಮಂಜುನಾಥಗೌಡ ಇಲ್ಲ, ಹ್ಯಾರಿಸ್ ಇಲ್ಲ, ವಡ್ನಾಳ ರಾಜಣ್ಣ.

ಚನ್ನಗಿರಿಯ ಪಟ್ಟಣ ಪಂಚಾಯ್ತಿಗಳನ್ನು ಮೇಲ್ದರ್ಜೆಗೇರಿಸುವುದು:

223 (2866); ಶ್ರೀ ವಡ್ನಾಳ ರಾಜಣ್ಣ (ಚನ್ನಗಿರಿ)

ಅ) ಚನ್ನಗಿರಿಯ ಪಟ್ಟಣ ಪಂಚಾಯ್ತಿಯನ್ನು ಮೇಲ್ದರ್ಜೆಗೇರಿಸುವ ವಿಚಾರ ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು?

ಶ್ರೀ ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಇದೆ.

ಆ) 2011ರ ಜನಗಣತಿಯನ್ವಯ ಚನ್ನಗಿರಿ ಪಟ್ಟಣ ಪಂಚಾಯ್ತಿಯನ್ನು ಪುರಸಭೆಯನ್ನಾಗಿ ಪರಿವರ್ತಿಸಲು ಅರ್ಹವಿದ್ದು ಅದರಂತೆ ಕರ್ನಾಟಕ ಪೌರಸಭೆಗಳ ಕಾಯ್ದೆ 1964ರ ಕಲಂ 3 ಹಾಗೂ 355 (ಇ) ರನ್ವಯ ಕ್ರಮ ಜರುಗಿಸಲಾಗುತ್ತಿದೆ.

ಶ್ರೀ ವಡ್ನಾಳ್ ರಾಜಣ್ಣ: ಮಾನ್ಯ ಅಧ್ಯಕ್ಷರೆ, ಉತ್ತರಗಳನ್ನು ಒದಗಿಸಿದ್ದಾರೆ. ಚನ್ನಗಿರಿಯ ಪಟ್ಟಣ ಪಂಚಾಯಿತಿಯನ್ನು ಮೇಲ್ದರ್ಜೆಗೇರಿಸುವ ವಿಚಾರ ಸರ್ಕಾರದ ಮುಂದಿದೆಯೇ ಎಂದು ಕೇಳಿದ್ದೇನೆ. ಅದಕ್ಕೆ ಇದೆ ಎಂದು ಉತ್ತರ ಕೊಟ್ಟಿದ್ದಾರೆ. ಹಾಗಿದ್ದಲ್ಲಿ ಯಾವಾಗ ಕ್ರಮ ತೆಗೆದುಕೊಳ್ಳಲಾಗುವುದು

ಎಂಬ ಪ್ರಶ್ನೆಗೆ 2011ರ ಜನಗಣತಿಯ ಅನ್ವಯ ಚನ್ನಗಿರಿ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಪರಿವರ್ತಿಸಲು ಅರ್ಹವಿದ್ದು ಅದರಂತೆ ಕರ್ನಾಟಕ ಪೌರಸಭೆಗಳ ಕಾಯಿದೆ 1964 ಕಲಂ (3) ಹಾಗೂ 355 ಇ ಅನ್ವಯ ಕ್ರಮ ಜರುಗಿಸಲಾಗುತ್ತಿದೆ ಎನ್ನುವಂತಹ ಉತ್ತರ ಕೊಟ್ಟಿದ್ದಾರೆ. ನಾನು ಯಾವಾಗ ಎನ್ನುವಂತಹ ಪ್ರಶ್ನೆ ಕೇಳಿದ್ದೇನೆ. ದಯಮಾಡಿ ಯಾವಾಗ ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ತಿಳಿಸಬೇಕೆಂದು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಖಮರುಲ ಇಸ್ಲಾಂ: ಮಾನ್ಯ ಅಧ್ಯಕ್ಷರೆ, ಬುಧವಾರದ ದಿವಸ ಕ್ಯಾಬಿನೆಟ್‌ನಲ್ಲಿ ಚೆನ್ನಗಿರಿ ಅಪ್‌ಗ್ರೇಡ್ ಆಗಿದೆ. As per the rules, it will go to the Governor and they will call for objections. 100% ಆಗುತ್ತದೆ.

ಅಧ್ಯಕ್ಷರು: ಕೆ. ಶ್ರೀನಿವಾಸಮೂರ್ತಿ,

ಎಲೆಕ್ಟ್ರಿಕ್ ಸಂಬಳ ಬದಲಾವಣೆ

225 (2855); ಡಾ: ಕೆ. ಶ್ರೀನಿವಾಸಮೂರ್ತಿ (ನೆಲಮಂಗಲ)

ಅ) ನೆಲಮಂಗಲ ಮತಕ್ಷೇತ್ರ ವ್ಯಾಪ್ತಿಯ ಅನೇಕ ಗ್ರಾಮಗಳಲ್ಲಿ ಬಹಳ ವರ್ಷಗಳಿಂದ ತುಂಬ ಹಳೆಯದಾದ ವಿದ್ಯುಚ್ಛಕ್ತಿ ಕಬ್ಬಿಣದ ಕಂಬಗಳನ್ನು ಬದಲಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಆ ಗ್ರಾಮಗಳ ವಿವರ ನೀಡುವುದು;

ಇ) ಬೆಸ್ಕಾಂ ಅಧಿಕಾರಿಗಳ ನಿರ್ಲಕ್ಷತೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಹಳೆ ಕಂಬಗಳನ್ನು ಬದಲಾಯಿಸುವ ನಿರ್ಧಾರ ಸರ್ಕಾರದ ಹಂತದಲ್ಲಿ ಇದೆಯೇ; ಇದ್ದಲ್ಲಿ ಎಷ್ಟು ದಿನದಲ್ಲಿ ಬದಲಾಯಿಸಲಾಗುವುದು?